ಸಚಿವಾಲಯದ ಉಪಹಾರ ಮಂದಿರದ ನೌಕರರುಗಳಿಗೆ ತುಟ್ಟಿ ಭತ್ಯೆ ನೀಡುವ ಬಗ್ಗೆ.

294 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರ ಸಚಿವಾಲಯದ ಉಪಹಾರ ಮಂದಿರದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು?

ಆ) ಅವರುಗಳ ಪೈಕಿ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿರುವ ನೌಕರರುಗಳ ಸಂಖ್ಯೆ ಎಷ್ಟು?

ಇ) ಆ ನೌಕರರುಗಳಿಗೆ ಸರ್ಕಾರ ಇತ್ತೀಚೆಗೆ ವೇತನವನ್ನು ವಿಮರ್ಶಿಸುತ್ತಿದೆಯೇ?

ಈ) ಹಾಗಿದ್ದಲ್ಲಿ ವಿವಿಧ ದರ್ಜೆಯ ಆ ನೌಕರರುಗಳಿಗೆ ಯಾವ ಶ್ರೇಣಿಯಲ್ಲಿ ವೇತನ ನೀಡಲಾಗುತ್ತಿದೆ?

ಉ) ಆ ನೌಕರರುಗಳಿಗೆ ಸರ್ಕಾರದ ನೌಕರರುಗಳಿಗೆ ನೀಡುತ್ತಿರುವ ತುಟ್ಟಿಭತ್ಯೆಯನ್ನು ನೀಡಲಾಗುತ್ತಿದೆಯೆ?

ಊ) ಇಲ್ಲದಿದ್ದಲ್ಲಿ ಆ ನೌಕರರುಗಳಿಗೆ ತುಟ್ಟಿಭತ್ಯೆಯನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಎಪ್ಪತ್ತು (70)

ಮುವತ್ತೈದು (35)

ಪರಿಶೀಲಿಸುತ್ತಿದೆ.

ಉಪಹಾರ ಮಂದಿರದ ಆಡಳಿತ ಸಮಿತಿಯವರು ಉಪಹಾರ ಮಂದಿರದ ನೌಕರರ ವೇತನ ಪರಿಷ್ಕರಣೆ ಬಗ್ಗೆ ಅಧ್ಯಯನ ಮಾಡಲು ಉಪಸಮಿತಿಯನ್ನು ರಚಿಸಿದ್ದು ಅದರಂತೆ ಆಡಳಿತ ಸಮಿತಿಯವರೆ ಈ ಕೆಳಗಿನಂತೆ ವೇತನ ಶ್ರೇಣಿಯನ್ನು ದಿನಾಂಕ 1-12-93 ರಿಂದ ಪರಿಷ್ಕರಿಸಿ ವೇತನ ನೀಡುತ್ತಿದ್ದಾರೆ.

1. ಮೇಲ್ವಿಚಾರಕರು - 1190-30-1400-40-1800-50-2200.
2. ನಗದು ಗುಮಾಸ್ತರು : ಮುಖ್ಯ ಆಡಿಗೆಯವರು -960-20-1100-30-400-40-1760.
3. ಸಪ್ಲೈಯರ್ಸ್ -810-15-900-20-1100-30-1310
4. ಕ್ಲೀನರ್ಸ್ : -780-15-900-20-1040.

ಇಲ್ಲ

ಆದರೆ ಉಪಹಾರ ಮಂದಿರದ ವೇತನ ಉಪಸಮಿತಿಯ ವರದಿಯ ಪ್ರಕಾರ ದಿನಾಂಕ 1-12-93ರಿಂದ ನಾನಾ ವಿವಿಧ ದರ್ಜೆಯ ನೌಕರರುಗಳಿಗೆ ತುಟ್ಟಿಭತ್ಯೆ ರೂ.200, ರೂ.175, ರೂ.150 ಮತ್ತು ರೂ.100 ರಂತೆ ತುಟ್ಟಿಭತ್ಯೆ ನೀಡುತ್ತಿರುತ್ತಾರೆ.

ಇವರು ಸರ್ಕಾರಿ ನೌಕರರಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪುಷ್ಪಕ ಬಸ್ಸುಗಳನ್ನು ವಿಧಾನ ಸೌಧದ ಮೂಲಕ ಓಡಿಸುವ ವ್ಯವಸ್ಥೆ

296 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್. ವೃತ್ತದ ಮೂಲಕ ಎಷ್ಟು ಪುಷ್ಪಕ್ ಬಸ್ಸಗಳು ಪ್ರತಿದಿನ ಸಂಚರಿಸುತ್ತವೆ.

ಆ) ಅವುಗಳನ್ನು ವಿಧಾನಸೌಧದ ಮೂಲಕ ಓಡಿಸಿದರೆ ಸಾರ್ವಜನಿಕರಿಗೆ ಕಚೇರಿಗಳಿಗೆ ಹೋಗತಕ್ಕವರಿಗೆ ಅನುಕೂಲವಾಗುವುದಿಲ್ಲವೇ?